

ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!
—ಕುವೆಂಪು

ತೆಗೆಯುತ್ತಿರುತ್ತೀರಿ. ಹೀಗಾಗಿ ಸಾವಿರ ಪಟಗಳ ಕ್ಲಿಕ್ಕಿಸಿದರೆ ಅದರಲ್ಲಿ ಕೆಲವಷ್ಟೇ ಕೈಗೆ ಸಿಗಬಲ್ಲವು. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲವೂ ಲಾಟರಿ ಟಿಕೇಟ್ ಖರೀದಿಸಿದಂತೆ. ಒಂದೊಮ್ಮೆ ಡ್ರಾ ಆದರೂ ಬಹುಮಾನದ ಭರವಸೆ ಇರುವುದಿಲ್ಲ.

ನಿಸರ್ಗದ ಫೋಟೋಗ್ರಫಿಯ ವ್ಯವಹಾರವೇ ಇಂತಹದ್ದು. ಹಲವಾರು ಅಡೆತಡೆಗಳ ನಡುವೆ ಒಳ್ಳೆಯ ಪಟ ಹೆಕ್ಕಬೇಕು. ಎಲ್ಲದಕ್ಕೂ ತಾಳ್ಮೆ ಇರಬೇಕು. ಬಹಳಷ್ಟು ಸಲ ಅನ್ನಿಸುವುದು – ಬದುಕಿಗೆ ಬೇಕಾದ ಸಹನೆ, ಸೋತರೂ ಬಿಡದ ಭಂಡ ಧೈರ್ಯ; ಹಲವು ಅಸೌಲಭ್ಯಗಳ ನಡುವೆ ಗೆಲ್ಲುವ ಉಮೇದುತನ ಪ್ರಾಯಶಃ ಈ ಫೋಟೋಗ್ರಫಿ ಕಲಿಸುತ್ತಿದೆಯೋ ಏನೋ ಎಂದು? ಇದರ ಜೊತೆ ಸಣ್ಣ ಇರುವೆಯೂ ಗೂಡು ಕಟ್ಟುವ ಹಕ್ಕಿಯೂ ಸಾಹಸದ ಬಾಳುವೆ ಮಾಡುವ ಪ್ರಾಣಿಗಳೂ ಕೂಡ ಬದುಕಿನ ಪಾಠ ಕಲಿಸಬಲ್ಲವು. ನೀವೂ ಒಂದು ಕ್ಯಾಮೆರಾ ಕೊಂಡು ಇಂತಹ ದುಸ್ಸಾಹಸಗಳಿಗೆ ಇಳಿಯದ ಹೊರತು ನಾನಿಲ್ಲಿ ಕೊರೆದ ಅಷ್ಟೂ ಮಾತುಗಳು ನಿಮಗೆ ಬುರುಡೆ ಪುರಾಣವಾಗಿ ಕಂಡರೂ ಆಚ್ಚರಿಯಿಲ್ಲ. ತಲೆಹರಟೆ ಎನಿಸಿದರೂ ಅಸಹಜವೇನಲ್ಲ.

ಸರಿ, ನಮ್ಮ ಉಪ್ಪುನೀರ ಪಯಣ ಮುಂದುವರೆಯಿತು. ತಿರುಗಿ ನೋಡುವಾಗ ಸೂರ್ಯ ಮೂಡತೊಡಗಿದ್ದ. ಹಕ್ಕಿಗಳು ಗುಂಪಾಗಿ ಹಾರಾಡಲು ಶುರುವಾಗಿದ್ದವು. ಬೆಳಗಿನ ಹೊತ್ತಿನಲ್ಲಿ ಖಗಗಳು ಹೆಚ್ಚು ಚೈತನ್ಯ ಹೊಂದಿರುತ್ತವೆ. ಮುಂಜಾನೆಯ ಹೊತ್ತು ಆಹಾರ ಹುಡುಕಿಕೊಳ್ಳುವ ತವಕ ಅವುಗಳಲ್ಲಿ ಹೆಚ್ಚಾಗಿರುತ್ತದೆ. ಹೀಗಾಗಿಯೇ ಅದು ಮೀನುಗಳ ಬೇಟೆಯ ಸಮಯ.

ಕೆಲವು ಸಣ್ಣಪುಟ್ಟ ಏಡಿ, ಶಂಖದ ಹುಳು, ಕಪ್ಪೆ ಚಿಪ್ಪುಗಳ ಹಿಡಿದು ಮುಕ್ಕಲು ಒದ್ದಾಡುತ್ತಿರುತ್ತವೆ. ಆಗಸದಲ್ಲಿ ಹಾರಾಡುತ್ತಾ ನೀರ ಮೇಲೆ ದೃಷ್ಟಿ ನೆಟ್ಟ ಹದ್ದುಗಳು, ರಿವರ್ ಟರ್ನ್ ಮೀನುಗಳ ಚಲನೆಯನ್ನು ಗಮನಿಸುತ್ತಾ ಗಸ್ತು ತಿರುಗುತ್ತವೆ. ಅವುಗಳ ನೋಟ ಬಲು ಸೂಕ್ಷ್ಮ. ಅಷ್ಟು ಎತ್ತರದಿಂದಲೇ ತಮ್ಮ ಬೇಟೆಯ ಗಮನಿಸಿ ಕರಾರುವಕ್ಕಾದ ಗುರಿ ಇಟ್ಟು ದಾಳಿ ಮಾಡುತ್ತವೆ. ಕ್ಷಣಾರ್ಧದಲ್ಲಿ ಮೀನು ಎತ್ತಿಕೊಂಡು ಮ್ಯಾಂಗ್ರೋವ್ ಮರಗಳ ಮೇಲೆ ಇಲ್ಲವೇ ನಾಡದೋಣಿಗರು ಭದ್ರತೆಗೆ ನಿಲ್ಲಿಸಿದ ಮರದ ಗೂಟಗಳ ಮೇಲೆ ಹೋಗಿ ಕೂರುತ್ತವೆ. ಅಂತಹ ಕಡೆ ಹೊಂಚು ಹಾಕಿ ನೆಲೆ ನಿಲ್ಲುವುದು, ಪಟ ತೆಗೆಯುವುದು ನಮ್ಮ ಯೋಜನೆಯಾಗಿತ್ತು.

ಕ್ರಾಬ್ ಪ್ಲೋವರ್ (ಏಡಿಗೊರವ), ಬ್ರೌನ್ ಹೆಡೆಡ್ ಗಲ್, ಸ್ಯಾಂಡ್ ಪೈಪರ್, ಲಿಟಲ್ ಸ್ಟಿಂಟ್ ತರಹದ ಹಕ್ಕಿಗಳು ಹೆಚ್ಚಾಗಿ ಗುಂಪುಗುಂಪಾಗಿ ಇರುತ್ತವೆ. ಕೊಂಚ ಅಪಾಯ ಕಂಡರೂ ಗಾಬರಿಯಾಗಿ ಒಮ್ಮೆಗೇ ಪುರ್ರೆಂದು ಹಾರಿ ಮತ್ತೊಂದು ಕಡೆ ಇಳಿಯುತ್ತವೆ. ನಾವು ಹೆಚ್ಚು ಸಮೀಪವಾಗುತ್ತಲೂ ಇವು ಭಯದಿಂದ ಪರಸ್ಪರ ಮಾತಾಡಿಕೊಂಡಂತೆ ಪುಸಕ್ಕನೆ ಗಗನಕ್ಕೆ ಚಿಮ್ಮುತ್ತಿದ್ದವು. ಹಾಗೆ ಆಗಸಕ್ಕೆ ಹಾರುವ ನೋಟ ಒಂದು ಕಾವ್ಯಮಯ ಸನ್ನಿವೇಶ. ಇಲ್ಲಿನ ಕೆಲವು ಚಿತ್ರಗಳು ನಿಮಗೆ ಆ ಸಂದರ್ಭದ ಸೊಬಗನ್ನು ಹೇಳಬಲ್ಲವು.

ಇವುಗಳಿಗೆ 'ಒಬ್ಬ ಮೈನ್ ಲೀಡರ್ ಇರುತ್ತಾನೆ ಸಾರ್. ಅವನೇ ಎಲ್ಲರಿಗೂ ಡೈರಕ್ಷನ್ ಕೊಡುವುದು' ಎಂದು ನಾರಾಯಣ ಹೇಳಿದ. ಅವನ ಮಾತು ನಿಜವಿದ್ದರೂ ಇದ್ದೀತು. ಆದರೂ 'ಗ್ಯಾಂಗ್ ಲೀಡರ್ ಗಂಡು ಅಂತ ಅಷ್ಟು ಕರೆಕ್ಟಾಗಿ ಹೇಗೆ ಹೇಳುತ್ತೀಯಾ ನಾರಾಯಣ' ಎಂದು ಅವನನ್ನು ಪ್ರಶ್ನಿಸಿದೆ. 'ಎಲ್ಲಾ ಕಡೆ ಗಂಡಸಿನ ದರ್ಬಾರೆ ನಡಿಯದಲ್ಲವಾ ಸಾರೂ, ಇಲ್ಲೂ ಹಾಗೇ ಅಲ್ವಾ?' ಎಂದು ಒಂದು ಸರಳ ಸಮಜಾಯಿಷಿ ಬಿಸಾಡಿದನು. ಈ ವಿಷಯದಲ್ಲಿ ಅವನಷ್ಟು ಪರಿಣಿತನಲ್ಲದ ನಾನು ದುಸರಾ ಮಾತಾಡಲು ಹೋಗಲಿಲ್ಲ.

ಅವುಗಳ ಕ್ರಮಬದ್ಧ ಹಾರಾಟ, ಸೂಚಿಸಿದ ಕಡೆ ನಿಗದಿತವಾಗಿ ಇಳಿಯುವ ಸಂಗತಿಗಳ ಗಮನಿಸಿದರೆ ಟೀಮ್ ಲೀಡರೊಬ್ಬ ಇರಲೇಬೇಕು ಎನಿಸುತ್ತಿತ್ತು. ಕೆಲವು ಹಕ್ಕಿಗಳ ಗುಂಪಿಗೆ ಹೀಗೆ ಒಬ್ಬೊಬ್ಬ ಅನುಭವಿ ನಾಯಕ ಇರುವುದು ಹೌದೆಂದು ಪಕ್ಷಿಶಾಸ್ತ್ರಜ್ಞರೂ ಹೇಳುತ್ತಾರೆ. ಆ ಮುಂದಾಳು ಸಾವಿರಾರು ಮೈಲುಗಳ ವಲಸೆ ಪ್ರಯಾಣದಲ್ಲಿ ದಿಕ್ಕು ತೋರುವ ಮಾರ್ಗದರ್ಶಕನಾಗಿ ಕಾರ್ಯ ನಿರ್ವಹಿಸುತ್ತಾನೆ.